# ಸಾರ್ವತ್ರಿಕ ಸುವಾರ್ತೆಯು ಕ್ರಿಯಾಶೀಲವಾಗಿದೆ

ಮೋಶೆಯ ಧರ್ಮಶಾಸ್ತ್ರವನ್ನು ನಿರಾಕರಿಸುವದು ಅಬ್ರಹಾಮನ ಮಕ್ಕಳಿಗೆ ಅಂದರೆ ಯೆಹೂದ್ಯರಿಗೆ ಕಷ್ಟಕರವಾದ ಸಂಗತಿಯಾಗಿತ್ತು. ಹಬ್ಬಗಳನ್ನು, ಯಜ್ಞಗಳನ್ನು, ಸಂಪ್ರದಾಯಗಳನ್ನು, ಹಾಗೂ ವೈಯಕ್ತಿಕವಾದ ಭೋಜನ ಪದಾರ್ಥಗಳನ್ನು ಸೇವಿಸುವ ನಿಯಾಮಾವಳಿಗಳನ್ನು ಬದಲಾಯಿಸಿಕೊಳ್ಳುವದು ಕಷ್ಟವಾಗಿತ್ತು. ಹಾಗೂ ಯೆಹೂದ್ಯರು ಬಹಳವಾಗಿ ದ್ವೇಷಿಸಿದ್ದ ಅನ್ಯರನ್ನು ಪ್ರತಿದಿನ ತಮಗೆ ಸರಿಸಮಾನವಾಗಿ ಮಾಡಿಕೊಳ್ಳುವದು ಅಸಾಧ್ಯವಾದ ಸಂಗತಿಯಾಗಿತ್ತು.

ಯೆಹೂದ್ಯರು ಈ ಧರ್ಮಶಾಸ್ತ್ರವನ್ನು ದುರುಪಯೋಗ ಪಡಿಸಿಕೊಂಡ ಕಾರಣ, ದೇವರು ಅದನ್ನು ಪೂರ್ಣ ಬದಲಾಯಿಸಿದನು. ಅಧರ್ಮ ಶಾಸ್ತ್ರದ ಮೂಲಕ ಯೆಹೂದ್ಯರು ನಿಷ್ಠುರ, ಶಾಸನ ಬದ್ಧರು, ಮತಾವಲಂಬಿಗಳು ಅಥವಾ ಸ್ವನೀತಿಯನ್ನು ಹೊಂದಬೇಕೆಂದು ದೇವರು ಇಚ್ಛಿಸಲಿಲ್ಲ. ಈ ಕಪಟವಾದ ಬೋಧನೆಗಳಿಗೆ ಯೇಸು ತದ್ವಿರುದ್ಧವಾದ ಉಪದೇಶ ವನ್ನು ನೀಡಿದಾಗ ಅವುಗಳನ್ನು ಬಲವಾಗಿ ಖಂಡಿಸಿದನು, ಮತ್ತಾಯ 23ರಲ್ಲಿ, ಫರಿಸಾಯರು ಹಾಗೂ ಸದ್ದುಕಾಯರನ್ನು ಕುರಿತು “ಅಯ್ಯೋ” ಎಂಬ ಪದವನ್ನು ಏಳುಸಾರಿ ಬಳಸಿರುವನು ಆತನು ಈ “ಅಯ್ಯೋ” ಎಂಬ ಪದವನ್ನು ಬಳಸಿದಾಗ, ಅವರನ್ನು ಕಪಟಿಗಳೆಂದು ಹಾಗೂ ಕುರುಡ ಮಾರ್ಗದರ್ಶಿಗಳು ಎಂದು ಕರೆದನು (ವಚನ 16).

ಈ ಧರ್ಮಶಾಸ್ತ್ರವನ್ನು ಅನುಸರಿಸುತ್ತಿದ್ದ ನಾಯಕರುಗಳು ಆ ನಿಯಮಗಳನ್ನು ಪಾಲಿಸುವದರಿಂದ ದೇವರ ದೃಷ್ಟಿಯಲ್ಲಿ ನೀತಿವಂತರೆಂದು ಪರಿಗಣಿಸಲ್ಪಡುವರು ಎಂದು ಯೆಹೂದ್ಯರು ತಿಳಿದಿದ್ದರು. ಪೌಲನು ಈ ವಿಚಾರದಲ್ಲಿ ಬಹಳ ದುಃಖಪಟ್ಟನು (ರೋಮಾಪುರ 9:1-5). ಅವರ ಅಭಿಮಾನವನ್ನು ಅವನು ಮೆಚ್ಚಿದ್ದನು, ಆದರೆ ಅವರು ದೇವರಿಂದ ದೊರಕುವ ನೀತಿಯನ್ನರಿಯದೆ ಸ್ವನೀತಿಯನ್ನೇ ಸ್ಥಾಪಿಸಿಕೊಳ್ಳುವ ವಿಚಾರವನ್ನು ಖಂಡಿಸಿದನು (ರೋಮಾಪುರ 10:1-4). ಮೆಸ್ಸೀಯನ ವಾಗ್ದಾನವನ್ನು ತಮ್ಮ ಸ್ವಾರ್ಥಲಾಭಕ್ಕಾಗಿ ನಂಬಿದ್ದರು, ಮತ್ತು ಈ ಮನೋಭಾವವನ್ನು ಬೆಳಿಸಿಕೊಂಡಿದ್ದರು. ಅಬ್ರಹಾಮನ ಸಂತಾನದವರು ಮಾತ್ರ ರಕ್ಷಿಸಲ್ಪಟ್ಟರು ಅನ್ಯರು ಎಂದಿಗೂ ದೇವರ ಕೃಪೆಯನ್ನು ಹೊಂದಲಾರರು ಎಂದು ನಂಬಿದ್ದರು. ಅನ್ಯರು ನಾಯಿಗಳಿಗಿಂತ ಕೀಳಾದವರು ಎಂದು ತಿಳಿದಿದ್ದರು.

ತೀವ್ರ ಸುಧಾರಣೆ, ಕಾರಣವಿಲ್ಲದ ಜನಾಂಗಿಯ ವಿಭಜನೆಯನ್ನು ಹೊಂದಿದವರಾದ ಪ್ರಥಮ ಶತಮಾನದ ಯೆಹೂದ್ಯರು ಸ್ವಾರ್ಥಿಗಳಾಗಿದ್ದರು, ಸ್ವನೀತಿವುಳ್ಳವರಾಗಿದ್ದರು ಹಾಗೂ ಪ್ರಪಂಚದ ಇತಿಹಾಸಕ್ಕೆ ಹೊಂದದಂಥ ಸಂಕುಚಿತ ಮನೋಭಾವದವರಾಗಿದ್ದರು.

ಅವರ ಸಂಕುಚಿತ ಮನೋಭಾವದ ಮೂಲಕ ಉಂಟಾಗಿದ್ದ ಆತ್ಮೀಕ ಕುರುಡು ತನವು ಅಪೊಸ್ತಲರಿಗೆ ಅಡ್ಡಿಯಾಗಿದ್ದವು. ಅಪೊಸ್ತಲರು ಅವರ ಮೇಲೆ ಸಾಮಾನ್ಯವಾದ ತಪ್ಪು ಭಾವನೆ ಹೊಂದಿದ್ದರೂ, ಅದರಲ್ಲಿ ಅನ್ಯರ ರಕ್ಷಣೆಯ ಕುರಿತ ಉಲ್ಲೇಖವು ಒಳಗೊಂಡಿರುತ್ತದೆ. ಯೇಸು ಅವರಿಗೆ, “ಜಗತ್ತಿಗೆಲ್ಲಾ ಹೋಗಿ ಸುವಾರ್ತೆ ಸಾರಿರಿ” ಎಂದು ಹೇಳಿದಾಗ (ಮಾರ್ಕ 16:15; KJV) “ಪ್ರತಿ ಯೆಹೂದ್ಯರಿಗೂ ಸುವಾರ್ತೆಯನ್ನು ಸಾರಿರಿ” ಎಂಬ ತತ್ವವನ್ನು ಅರ್ಥಮಾಡಿಕೊಂಡಿರಬಹುದು. ಯೇಸು, “ಅವರಿಗೆ ಸಕಲ ಜನಾಂಗದವರನ್ನು ಶಿಷ್ಯರನ್ನಾಗಿ ಮಾಡಿರಿ” (ಮತ್ತಾಯ 28:19), ಎಂದು ಹೇಳಿದಾಗ, “ಪ್ರತೀ ದೇಶದಲ್ಲಿರುವ ಯೆಹೂದ್ಯರನ್ನು ಶಿಷ್ಯರನ್ನಾಗಿ ಮಾಡಿರಿ” ಎಂಬ ಅರ್ಥವನ್ನು ಹೊಂದಿರಬಹುದು. “ಆ ವಾಗ್ದಾನವು ನಿಮಗೂ

ನಿಮ್ಮ ಮಕ್ಕಳಿಗೂ ದೂರವಾಗಿರುವವರೆಲ್ಲರಿಗೂ ಅಂತೂ ನಮ್ಮ ದೇವರಾಗಿರುವ ಕರ್ತನು ತನ್ನ ಕಡೆಗೆ ಕರೆಯುವವರೆಲ್ಲರಿಗೆ ಮಾಡೋಣವಾಗಿದೆ" ಎಂದು ಪೇತ್ರನು ಪಸ್ಕ ಹಬ್ಬದ ದಿವಸ ಪ್ರಸಂಗಿಸಿದ್ದನು (ಅಪೊಸ್ತಲರ ಕೃತ್ಯಗಳು 2:39). ಬಹುಶಃ ಪೇತ್ರನ ಈ ಹೇಳಿಕೆಯ ನಂತರ, ಇತರೆ ಅಪೊಸ್ತಲರು ಇದನ್ನು ಕೇಳಿ ಈ ಪ್ರಸಂಗವನ್ನು ಮಾಡಿರಬಹುದು ಮತ್ತು ದೂರವಾಗಿದ್ದ ಯೆಹೂದ್ಯರಿಗೆ ಎಂದು ಅರ್ಥ ಮಾಡಿಕೊಂಡರು. ಆದ್ದರಿಂದ ಅಪೊಸ್ತಲರ ಕೃತ್ಯಗಳು 2 ರ ಪಂಚಾಶತ್ತಮದ ಮಹಾ ಹಬ್ಬದದಿನದಂದು, ಯಾವುದೇ ಅನ್ಯರಿಗೆ ಅಪೊಸ್ತಲರು ದೇವರ ಕೃಪೆಯನ್ನು ನೀಡದೆ ಇರಬಹುದು!

ತರುವಾಯ ಪೌಲನು ಸೊಲೊಮೋನನ ಮಂಟಪದಲ್ಲಿ ಮಾತನಾಡುವಾಗ, "ಆತನು ಅಬ್ರಹಾಮನಿಗೆ - ನಿನ್ನ ಸಂತತಿಯ ಮೂಲಕ ಭೂಲೋಕದ ಎಲ್ಲಾ ಕುಲದವರಿಗೂ ಆಶೀರ್ವಾದವುಂಟಾಗುವದು" ಎಂದು ಆ ಒಡಂಬಡಿಕೆಯನ್ನು ಮಾಡಿಕೊಂಡನಲ್ಲಾ ಅಂದನು (ಅಪೊಸ್ತಲರ ಕೃತ್ಯಗಳು 3:25). ಪ್ರಾಯಶಃ ಅಲ್ಪ ಬುದ್ಧಿವಂತರಾದ ಯೆಹೂದ್ಯರು ಇದನ್ನು "*ಯೆಹೂದ್ಯ* ಕುಟುಂಬದವರಿಗೆ" ಎಂದು ತಿಳಿದಿರಬಹದು, ಆದರೆ, ದೇವರು "ಭೂಲೋಕದ ಎಲ್ಲಾ ಕುಲಗಳಿಗೆ" ಎಂದು ಸ್ಪಷ್ಟಪಡಿಸಿರುವನು.

ತಾರ್ಸದ ಸೌಲನ ಪರಿವರ್ತನೆಯ ಸಂದರ್ಭದಲ್ಲಿ, ಅವನನ್ನು ದೀಕ್ಷಾಸ್ನಾನ ಮಾಡಿಸಿದವನು ಅವನಿಗೆ, "ಅನ್ಯರ ಮುಂದೆ ಆತನ ಹೆಸರನ್ನು ತಿಳಿಸಬೇಕೆಂದು [ಯೇಸುವಿನ] ಹೇಳಿದನು" (ಅಪೊಸ್ತಲರ ಕೃತ್ಯಗಳು 9:15). ಸಭಾ ಪ್ರಾರಂಭವಾದ ನಾಲ್ಕು ವರ್ಷಗಳ ನಂತರ ಪೌಲನು ಪರಿವರ್ತನೆಗೊಂಡದ್ದರಿಂದ, ಇತರರ ಕುರಿತ ದೇವರ ಹೇಳಿಕೆಯನ್ನು ಅನನೀಯನು ಅಪೊಸ್ತರಿಗೆ ಹೇಳಿರಬಹುದು. ಈ ವಿಚಾರವನ್ನು ಅಪೊಸ್ತಲರಾಗಲೀ, ಯೆಹೂದ್ಯ ಸಹೋದರರಾಗಲೀ ಇಲ್ಲಿಯವರೆಗೆ ಅರಿಯದೆ ಇರುವದು ಆಶ್ಚರ್ಯವೆ.

ಇನ್ನೂ ಅನೇಕ ಅದ್ಭುತ ಕಾರ್ಯಗಳು ಜರುಗಿದ ನಂತರ ಅಪೊಸ್ತಲರು ಅನ್ಯರಿಗೆ ಸುವಾರ್ತೆಯನ್ನು ಸಾರಿದರು! ನಂತರ ಪೇತ್ರನು ರೋಮಾದ ಶತಾಧಿಪತಿಯಾದ ಕೊರ್ನೇಲ್ಯಯನ ಮನೆಗೆ ಹೋಗಬೇಕೆಂಬ ಕರೆಯನ್ನು ಹೊಂದಿದಾಗ, ಈ ಅನ್ಯನ ಪ್ರಥಮ ಪರಿವರ್ತನೆಗೆ, ಅಧಿಕವಾದ ಪ್ರಕಟನೆ ಹಾಗೂ ಅದ್ಭುತದ ಅವಶ್ಯವುಂಟಾಯಿತು (ಅಪೊಸ್ತಲರ ಕೃತ್ಯಗಳು 10). ಈ ವಿಚಾರದಲ್ಲಿ ಪೇತ್ರನ ಕ್ರಿಯೆಯನ್ನು ಪರಿಶೀಲಿಸ ಬೇಕಾದ ಸಂದರ್ಭವುಂಟಾಯಿತು, ಅಲ್ಲಿದ್ದ ಕ್ರೈಸ್ತ ಸಹೋದರರಲ್ಲಿಯೂ ಸಹ ಈ ಜನಾಂಗಿಯ ಗೊಂದಲವುಂಟಾಯಿತು (ಅಪೊಸ್ತಲರ ಕೃತ್ಯಗಳು 11:1-18). ಈ ಸಮಸ್ಯೆ ಸತ್ಯದಿಂದ ಪರಿಶೋಧಿಸಿದ ಚರಿತ್ರೆಯನ್ನು ಅಪೊಸ್ತಲರ ಕೃತ್ಯಗಳು ಪುಸ್ತಕವು ಹೊಂದಿರುತ್ತದೆ.

## ಒಂದು ಸಾರ್ವತ್ರಿಕ ಮನೋಭಾವ

**ಸಮಯದ ತೊಡಗುವಿಕೆ**

ಅಪೊಸ್ತಲರ ಕೃತ್ಯಗಳು 2ರಲ್ಲಿ, ಕ್ರಿ.ಶ. 33ರ ಸಾಮಾನ್ಯವಾದ ದಿನದರ್ಶಿಕೆಯಲ್ಲಿ (ಕ್ಯಾಲೆಂಡರನಲ್ಲಿ) ಪಂಚಾಶತ್ತಮ ದಿನದ ಘಟನೆಗಳನ್ನು ದಾಖಲು ಮಾಡಲಾಗಿದೆ. ಅನೇಕ ಪಂಡಿತರುಗಳು, ಕೊರ್ನೇಲ್ಯನ ಘಟನೆಯು ಕ್ರಿ.ಶ. 38-40ರಲ್ಲಿ ಜರುಗಿದೆ ಎಂದು ಹೇಳಿರುವರು. ಅನ್ಯರ ಹಾಗೂ ಸುನ್ನತಿಯ ಕುರಿತಾದ ಮುಂದುವರಿದ ಗೊಂದಲವನ್ನು ಯೆರೂಸಲೇಮಿನಲ್ಲಿ ನಡೆದ ವಿಶೇಷ ಸಭೆಯಲ್ಲಿ ನಿರ್ಣಯಿಸಲಾಯಿತು (ಅಪೊಸ್ತಲರ ಕೃತ್ಯಗಳು 15) ಪಂಡಿತರು ಅದನ್ನು ಕ್ರಿ.ಶ. 51ರಲ್ಲಿ ಎಂದಿರುವರು.

ಕ್ರೈಸ್ತರಲ್ಲಿ ಉಂಟಾಗಿದ್ದ ಜನಾಂಗಿಯ ಬೇಧವನ್ನು ಸರಿಪಡಿಸಲು ಸುಮಾರು ಇಪ್ಪತ್ತು ವರ್ಷಗಳು ಬೇಕಾಯಿತು! ಈ ಕಾರ್ಯವು ಅಪೊಸ್ತಲರಿಗೆ ಪವಿತ್ರಾತ್ಮ ಪ್ರೇರಣೆಯಿಂದಲೇ ಉಂಟಾಯಿತು. ದೇವರ ಪ್ರೇರಣೆಯಿಂದ ಮಾತ್ರ ಈ ಭಾವವು ಅವರಲ್ಲಿ ಬದಲಾವಣೆಯಾಗದೆ,

ದೇವರ ಸತ್ಯದಲ್ಲಿಯೇ ಮುಂದುವರೆದ ತಿಳುವಳಿಕೆಯು ಇವರಿಗೆ ಸರಿಯಾದ ಮನೋಭಾವನೆಯ ನಿರ್ಣಯವನ್ನು ನೀಡಿತು.

**ಬದಲಾವಣೆಯ ತೊಡಗುವಿಕೆ**

ಮೂರು ವಿಧವಾದ ವ್ಯತ್ಯಾಸಗಳನ್ನು ಅಪೊಸ್ತಲರ ಕೃತ್ಯಗಳು ತಿಳಿಸುತ್ತದೆ. ಈ ಕೆಳಕಂಡಂತಹ ಮನೋಭಾವಗಳನ್ನು ಆದಿ ಕ್ರೈಸ್ತರು ಹೊಂದಿರಬಹುದು: "ನಾವು ಇಬ್ರಿಯರಾಗಿರುವದರಿಂದ, ಮೆಸ್ಸೀಯನು ನಮಗೆ ಮಾತ್ರ ಮೀಸಲಾಗಿರುವನಲ್ಲವೇ?" (ಅಪೊಸ್ತಲರ ಕೃತ್ಯಗಳು 1-7).

ಎರಡನೆಯದಾಗಿ, ಮುಯ್ಯಿತೀರಿಸುವ ಮನೋಭಾವವನ್ನು ಪ್ರದರ್ಶಿಸಲಾಯಿತು: "ಸಮಾರ್ಯದ ಅನ್ಯರಿಗೆ ಸುವಾರ್ತೆ ಸಾರುವ ವಿಚಾರವನ್ನು ಮೆಚ್ಚಿಕೊಂಡರು, ಅದರ ಬಗ್ಗೆ ಉತ್ಪೇಕ್ಷೆ ಇರುವದಿಲ್ಲ" ಅಂದರು (ಅಪೊಸ್ತಲರ ಕೃತ್ಯಗಳು 8ರಲ್ಲಿರುವಂತೆ).

ಅದರಲ್ಲಿ ತೀವ್ರವಾದದ ಮನೋಭಾವವು ಅಡಗಿತ್ತು: "ಪೇತ್ರನೇ, ಅನ್ಯರಿಗೆ ದೀಕ್ಷಾಸ್ನಾನ ಮಾಡಿಸುವದು ಎಂದರೇನು? ದೇವರ ಈ ಕಾರ್ಯವನ್ನು ಅವನು ಮತ್ತು ಅವನ ಮನೆಯವರು ಸ್ವೀಕಾರ ಮಾಡಿದ್ದರೂ, ಅವರು ಸುನ್ನತಿ ಮಾಡಿಸಿಕೊಳ್ಳಬೇಕಿತ್ತು" (ಅಪೊಸ್ತಲರ ಕೃತ್ಯಗಳು 10 ರಿಂದ 14ರವರೆಗೆ).

ನಾಲ್ಕನೆಯದಾಗಿ, ಸರಿಕಾಣುವ ಹಾಗೂ ಯೋಗ್ಯವಾದ ಮನೋಭಾವವನ್ನು ಹೊಂದಿ ಅನುಸರಿಸಬೇಕು: "ಕ್ರಿಸ್ತನು ಎಲ್ಲರಿಗಾಗಿ ಮರಣವನ್ನು ಹೊಂದಿದನು, ಎಂದು ಈಗ ಅರಿತು ಪ್ರತಿಯೊಬ್ಬರಿಗೂ ಸುವಾರ್ತೆಯನ್ನು ಸಾರುವೆವು" (ಅಪೊಸ್ತಲರ ಕೃತ್ಯಗಳು 15-28). ಈ ಕಡೇಯ ಮನೋಭಾವದ ನಿಮಿತ್ತ ಸುವಾರ್ತೆಯು ಸಾರ್ವತ್ರಿಕವಾಗಿ ಹರಡಿತು.

## ಸಾರ್ವತ್ರಿಕ ಸಾರೋಣ

ಕೋರ್ನೇಲ್ಯನ ಪರಿವರ್ತನೆಯವರೆಗೂ, ಪೌಲನು ಯೆಹೂದ್ಯರಿಗಾಗಲೀ ಅಥವಾ ತೀವ್ರ ವಾದಿಗಳಿಗಾಗಲೀ ಪ್ರಸಂಗಿಸಿರಲಿಲ್ಲ (ಅಪೊಸ್ತಲರ ಕೃತ್ಯಗಳು 10:1-4). ಅವನು ರೋಮಾಯ ಸಾಮ್ರಾಜ್ಯದ ನುರಿತ ಸಿಪಾಯಿಗಳಲ್ಲಿ, ವಿಶಿಷ್ಟವಾದ ವ್ಯಕ್ತಿಯಾಗಿದ್ದನು. ಅವನು ದೇವರಿಗೆ ಸಮರ್ಪಿಸಿಕೊಂಡನು, ದೇವ ಭಯವುಳ್ಳವನು, ಧಾನಧರ್ಮಮಾಡುವವನು ಹಾಗೂ ಪ್ರಾರ್ಥಿಸುವ ವ್ಯಕ್ತಿಯಾಗಿದ್ದನು. ಅವನ ಸೇವಕರೇ ಅವನನ್ನು ಕುರಿತು ಅವನು ನೀತಿವಂತನು ಎಂದು ಸಾಕ್ಷಿ ನೀಡಿದ್ದರು, ಮತ್ತು ಯೆಹೂದ್ಯರಲ್ಲಿ ಗೌರವಾನ್ವಿತನು ಎಂದು ಸಾಕ್ಷಿ ಹೇಳಿದ್ದರು (ವಚನ 22). ಅವನು ಕ್ರೈಸ್ತನಾಗದೆ ಇದ್ದರೂ, ದೇವರೊಂದಿಗೆ ಸಹಜವಾದ ಸಂಬಂಧವನ್ನು ಹೊಂದಿದ್ದನು.

ಅಪೊಸ್ತಲರ ಕೃತ್ಯಗಳು 10ರಲ್ಲಿ ಕೋರ್ನೇಲ್ಯನ ಕುರಿತು, ನಾಲ್ಕು ಅದ್ಭುತ ಕಾರ್ಯಗಳನ್ನು ಕಂಡುಕೊಳ್ಳುತ್ತೇನೆ. ಮೊದಲನೆಯದಾಗಿ, ದೇವದೂತನು ಕೋರ್ನೇಲ್ಯನಿಗೆ ಕಾಣಿಸಿಕೊಂಡು ಪ್ರಸಂಗಿಯಾದ ಪೇತ್ರನನ್ನು ಕರೆಯಿಸಬೇಕೆಂದು ಹೇಳಿದನು (ಅಪೊಸ್ತಲರ ಕೃತ್ಯಗಳು 10:3-7). ಎರಡನೆಯದಾಗಿ ಜೋಳಿಗೆಯಂತಿದ್ದ ವಸ್ತು ಭೂಮಿಯ ಮೇಲೆ ಇಳಿದು ಬರುವದನ್ನು ಕಂಡನು ಅದರಲ್ಲಿ ಕ್ರಿಮಿಕೀಟ ಹಾಗೂ ಹಕ್ಕಿಗಳು ಇದ್ದವು (ವಚನಗಳು 9-16). ಅದು ಮೂರು ಸಾರಿಯು ಮೇಲಿನಿಂದ ಇಳಿದು ಬಂತು, ನಂತರ ಅದರಲ್ಲಿರುವದನ್ನು ಪೇತ್ರನು ತಿನ್ನಬೇಕೆಂಬ ಕರೆ ಉಂಟಾಯಿತು. ಅದರಲ್ಲಿ ಮೋಶೆಯ ಧರ್ಮಶಾಸ್ತ್ರದಲ್ಲಿ ತಿನ್ನಬಾರದೆಂದು ಉಲ್ಲೇಖವಾಗಿದ್ದ ಪ್ರಾಣಿಗಳು ಇದ್ದವು, ಆದ್ದರಿಂದ ಪೇತ್ರನು ಅದನ್ನು ತಿರಸ್ಕರಿಸಿದನು. ಕೋರ್ನೇಲ್ಯನ ಆಳುಗಳು ಪೇತ್ರ ನನ್ನು ಹುಡುಕಿಕೊಂಡು ಬರುವಾಗ ಮೂರನೇ ಅದ್ಭುತವು ಜರುಗಿತು, ಆಗ ಪೇತ್ರನು ಅವರ ಸಂಗಡ ಹೋಗಬೇಕೆಂದು ಪವಿತ್ರಾತ್ಮನು ಮಾರ್ಗದರ್ಶನ ನೀಡಿದನು (ವಚನಗಳು 17-20). ಕೋರ್ನೇಲ್ಯನ ಹಾಗೂ ಅವನಕುಟುಂಬದ ಮೇಲೆ ಪವಿತ್ರಾತ್ಮನು ಇಳಿದು ಬಂದದ್ದು

ನಾಲ್ಕನೆಯ ಅದ್ಭುತವಾಗಿದೆ, ಅವರು ಅನ್ಯಭಾಷೆ ಮಾತನಾಡುತ್ತಾ ದೇವರನ್ನು ಕೊಂಡಾಡಿದರು (ವಚನಗಳು 44-46).

ಈ ಯಾವುದೇ ಅದ್ಭುತ ಕಾರ್ಯಗಳು ಕೊರ್ನೇಲ್ಯನ ಪಾಪವನ್ನು ಕ್ಷಮಿಸಲಿಲ್ಲ, ಮತ್ತು ಹೊಸದಾಗಿ ಹುಟ್ಟುವ ಅನುಭವವನ್ನು ನೀಡಲಿಲ್ಲ. ಈ ಅದ್ಭುತದಲ್ಲಿ ಸಾಧನೆಗೊಂಡದ್ದನ್ನು ಗಮನಿಸೋಣ. ಮೊದಲನೆಯದಾಗಿ, ದೇವ ದೂತನು ಪ್ರತ್ಯಕ್ಷನಾದ್ದರಿಂದ, ಸುವಾರ್ತ ಪ್ರಸಂಗಿಯನ್ನು ಕರೆಯಿಸಲು ಸಾಧ್ಯವಾಯಿತು. ದೇವರ ಅಪ್ಪಣೆಯನ್ನು ಪಾಲಿಸಲು, ಅವನು ಮತ್ತು ಅವನ ಮನೆಯವರು ಸಿದ್ಧರಾಗಿದ್ದರು ಎಂದು ತಿಳಿಸಿದನು (ವಚನ 33). ನಂತರದಲ್ಲಿ, ಪೇತ್ರನು ಅಕ್ಷೇಪ ವ್ಯಕ್ತ ಪಡಿಸಿದ ಸಹೋದರರಲ್ಲಿ ಚರ್ಚಿಸುವಾಗ, ರಕ್ಷಣೆಗೆ ಕಾರಣವಾದ ಸುವಾರ್ತೆಯನ್ನು ಕೇಳಲು ಕೊರ್ನೇಲ್ಯನು ದೇವರ ಪ್ರಸಂಗಿಯನ್ನು ಕರೆಯಿಸಿಕೊಂಡನು ಎಂದು ತಿಳಿಸಿದನು (ಅಪೊಸ್ತಲರ ಕೃತ್ಯಗಳು 11:13, 14). ದೇವರ ಚಿತ್ತವನ್ನು ಅರಿತ್ತಿದ್ದ ಬೋಧಕನನ್ನು ಕರೆಕಳುಹಿಸುವ ಮೊದಲು, ಕೊರ್ನೇಲ್ಯನು ನಂಬಿದವನಾಗಿದ್ದನು ಎಂದು ಒಬ್ಬನು ಭಾವಿಸಬಾರದು. ಅನೇಕ ಪ್ರಾಣಿ ಪಕ್ಷಿಗಳನ್ನು ಹೊಂದಿದ್ದ ಪೇತ್ರನ ಜೋಳಿಗೆಯ ದರ್ಶನವು ಸಹ ಕೊರ್ನೇಲ್ಯನನ್ನು ರಕ್ಷಿಸಲಿಲ್ಲ, ಆದರೆ ಕೊರ್ನೇಲ್ಯನ ಸೇವಕರ ಸಂಗಡ ಪೇತ್ರನು ಹೋಗುವಂತೆ ಮಾತ್ರ ಸಹಕರಿಸಿತ್ತು. ಮೂರನೆಯ ಅದ್ಭುತದಲ್ಲಿ, ಕೊರ್ನೇಲ್ಯನ ಸೇವಕರ ಸಂಗಡ ಪೇತ್ರನು ಹೋಗುವಂತೆ ಪವಿತ್ರಾತ್ಮನು ಮಾರ್ಗದರ್ಶನ ನೀಡಿ ದನು, ಮತ್ತು ಅಂತ್ಯದಲ್ಲಿ ಕ್ರೈಸ್ತರಿಗೆ ಹೋಗುವಂತೆ ಮಾಡಿದನು. ನಾಲ್ಕನೆಯ ಅದ್ಭುತದಲ್ಲಿ, ಪವಿತ್ರಾತ್ಮನ ಬರುವಿಕೆಯಿಂದಲೂ ಅವನಿಗೆ ರಕ್ಷಣೆಯಾಗಲಿಲ್ಲ. ಆದರೆ, ಈ ಮನುಷ್ಯನಿಗೆ ಸುವಾರ್ತೆಯನ್ನು ಸ್ಪಷ್ಟಪಡಿಸಬೇಕೆಂಬ ವಿಚಾರವನ್ನು ಪೇತ್ರನಿಗೂ ಹಾಗೂ ಕೊರ್ನೇಲ್ಯನ ಸೇವಕಿಗೂ ಮನದಟ್ಟು ಮಾಡಿತು.

ಕೊರ್ನೇಲ್ಯನು ಅನ್ಯಭಾಷೆಯಲ್ಲಿ ಮಾತನಾಡಿದ ಸಂಗತಿಯು ಗಮನಾರ್ಹವಾಗಿದೆ. ಅವರೆಲ್ಲರು ಯೇಸುವೇ ದೇವರ ಮಗನೆಂದು ಅರಿಯಲು, ದೇವರ ಆತ್ಮನು ಅವರ ಮೇಲೆ ಇಳಿದಿದ್ದನು. "ನಾನು ಮಾತಾಡುವದಕ್ಕೆ ಆರಂಭಿಸಿದಾಗ ಪವಿತ್ರಾತ್ಮವರವು ಮೊದಲು ನಮ್ಮ ಮೇಲೆ ಇಳಿದಂತೆ ಅವರ ಮೇಲೆಯೂ ಇಳಿಯಿತು" ಎಂದು ಪೇತ್ರನು ಹೇಳಿದನು (ಅಪೊಸ್ತಲರ ಕೃತ್ಯಗಳು 11:15). ಮುಂದೆ ಪೇತ್ರನು ಆಡಿದ ಮಾತುಗಳಿಂದಲೇ ಕೊರ್ನೇಲ್ಯನಿಗೆ ರಕ್ಷಣೆಯು ಉಂಟಾಯಿತು, ಆ ಮಾತುಗಳನ್ನು ಅವನು ಕೇಳುವವರೆಗೆ, ಅವನಿಗೆ ಪಾಪದಿಂದ ರಕ್ಷಣೆಯಾಗಲಿಲ್ಲ (ಅಪೊಸ್ತಲರ ಕೃತ್ಯಗಳು 11:14). ಆ ಮಾತುಗಳನ್ನು ಕೊರ್ನೇಲ್ಯನ್ನು ಕೇಳುವ ಮೊದಲೇ ಪವಿತ್ರಾತ್ಮನು ಇಳಿದು ಬಂದ ಕಾರಣದಿಂದ, ಪೇತ್ರನು ಅವನಿಗೆ ಸುವಾರ್ತೆಯನ್ನು ಹೇಳುವ ಸಾಧ್ಯತೆ ಉಂಟಾಯಿತು. ದೇವರು ಕೊರ್ನೇಲ್ಯನಿಗೆ ಆತ್ಮನ ಸ್ನಾನವನ್ನು ನೀಡಿದ್ದರಿಂದ, ತನಗುಂಟಾದ ಆತ್ಮನ ಸ್ನಾನದ ನೆನಪು ಪೇತ್ರನಿಗುಂಟಾಯಿತು (ಅಪೊಸ್ತಲರ ಕೃತ್ಯಗಳು 11:16, 17).

ಈ ಸಂದರ್ಭದ ಅಂತ್ಯದಲ್ಲಿ, ಪೇತ್ರನು, ಅನ್ಯರಾದವರು "ಯೇಸು ಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೆಂಬ ಆದೇಶವನ್ನು ನೀಡಿದನು" (ಅಪೊಸ್ತಲರ ಕೃತ್ಯಗಳು 10:48). ಎಂಟು ಅಥವಾ ಹತ್ತು ವರ್ಷಗಳ ಹಿಂದಿನ ಪಂಚಾಶತ್ತಮದಿನದಂದು ಪೇತ್ರನು ಯೆರೂಸಲೇಮಿನಲ್ಲಿ ಇದೇ ವಿಧವಾದ ದೀಕ್ಷಾಸ್ನಾನದ ಕುರಿತು ಸುವಾರ್ತೆ ಸಾರಿದ್ದನು ಅಪೊಸ್ತಲರ ಕೃತ್ಯಗಳು 2. ಈ ದೀಕ್ಷಾಸ್ನಾನವು ಯೇಸು ಕ್ರಿಸ್ತನ ಅಧಿಕಾರದಿಂದಲೇ ಉಂಟಾಗಿತ್ತು. ಪಂಚಾಶತ್ತಮ ದಿನದಂದು, "ಅವರ ಪಾಪಗಳು ಪರಿಹಾರವಾಗುವದಕ್ಕಾಗಿ" ದೀಕ್ಷಾಸ್ನಾನ ಮಾಡಿಸಿಕೊ ಳ್ಳಬೇಕೆಂದು ತಿಳಿಸಿದ್ದನು (ಅಪೊಸ್ತಲರ ಕೃತ್ಯಗಳು 2:38). ಈ ಕಾರಣದಿಂದ, ಕೊರ್ನೇಲ್ಯನ ಮನೆಯವರು ದೀಕ್ಷಾಸ್ನಾನ ಮಾಡಿಸಿಕೊಳ್ಳುವವರೆಗೂ, ಪಾಪ ಪರಿಹಾರ ಹೊಂದಿರಲಿಲ್ಲ. ದೀಕ್ಷಾಸ್ನಾನದ ಮೊದಲೇ ಪವಿತ್ರಾತ್ಮನು ಬಂದಿದ್ದರಿಂದ, ಅವರಲ್ಲಿ ಇನ್ನು ಪಾಪದ ಪರಿಹಾರದ ಕ್ರಿಯೆ ನಡೆದಿರಲಿಲ್ಲವೆಂಬ ತತ್ವವನ್ನು ಅರಿಯುತ್ತೇವೆ.

ಅಪೊಸ್ತಲರ ಕೃತ್ಯದಲ್ಲಿ ದಾಖಲಾಗಿರುವ ಇತರೆ ದೀಕ್ಷಾಸ್ನಾನಗಳ ಕುರಿತಾಗಿಯೂ ಇದೇ ಹೊಂದಾಣಿಕೆಯನ್ನು ಗಮನಿಸುತ್ತೇವೆ. ತಾರ್ಸದ ಸೌಲನಿಗೆ ಸಹ "ಎದ್ದು ದೀಕ್ಷಾಸ್ನಾನ ಮಾಡಿಸಿಕೊಂಡು ನಿನ್ನ ಪಾಪಗಳನ್ನು ತೊಳೆದುಕೊ" ಎಂದು ಹೇಳಲಾಯಿತು (ಅಪೊಸ್ತಲರ ಕೃತ್ಯಗಳು 22:16). ಒಬ್ಬನು ದೀಕ್ಷಾಸ್ನಾನದಿಂದ ಹೊರಬರುವಾಗ, ಕ್ರಿಸ್ತನಲ್ಲಿನ ನೂತನ ಜೀವಿತವನ್ನು ಪಡೆಯುವನು ಎಂಬ ವಿಚಾರವನ್ನು ಪೌಲನು ವಿವರಿಸಿರುವನು (ರೋಮಾಪುರ 6:3, 4). ಈ ವಿಧವಾದ ಸಿದ್ಧಾಂತಕ್ಕೆ ವಿಧೇಯನಾಗುವವನು ಪಾಪದ ಪರಿಹಾರವನ್ನು ಹೊಂದುವನು ಮತ್ತು ಬಿಡುಗಡೆ ಹೊಂದುವನೆಂದು ಸಹ ತಿಳಿಸಿರುವನು (ರೋಮಾಪುರ 6:17, 18). ಸತ್ಯವೇದದಲ್ಲಿನ, ದೀಕ್ಷಾಸ್ನಾನದ ಕುರಿತ ಸಿದ್ಧಾಂತವನ್ನು ಬಹಳವಾಗಿ ಅಪಾರ್ಥಮಾಡಿಕೊಳ್ಳಲಾಗಿದೆ. ಒಂದು ವೇಳೆ ಇದು ನಂಬಿಕೆಯ ಕುರಿತಾದ ದೇವರ ಕಡೇಯ ಪರೀಕ್ಷೆ ಇರಬಹುದು. ಈ ಅರ್ಥವಾಗದ ಸಿದ್ಧಾಂತಕ್ಕೆ ಯಾವುದೇ ಪಾಪಿಯು ತಿಳುವಳಿಕೆಯಿಂದ ವಿಧೇಯನಾಗಲು ಸಾಧ್ಯವಿದೇಯೆ?

## ಮುಕ್ತಾಯ

ಲೋಕದಲ್ಲಿನ ಪ್ರತಿಯೊಬ್ಬನಿಗೂ ಸಾರ್ವತ್ರಿಕವಾದ ಸುವಾರ್ತೆಯನ್ನು ದಯಪಾಲಿಸಲಾಗಿದೆ. ತನ್ನ ಮಗನ ಯಜ್ಞದ ಮೂಲಕ ದೇವರು ರಕ್ಷಣೆಯನ್ನು ಅನುಗ್ರಹಿಸಿರುವನು. "ಯಾಕಂದರೆ, ... ಎಲ್ಲಾ ಮನುಷ್ಯರಿಗೆ ರಕ್ಷಣೆಯುಂಟುಮಾಡುವ ದೇವರ ಕೃಪೆಯು ಪ್ರತ್ಯಕ್ಷವಾಯಿತು" (ತೀತ 2:11). ಒದಗಿರುವ ರಕ್ಷಣೆಯ ವರವನ್ನು ಅಂಗೀಕರಿಸುವದು ವ್ಯಕ್ತಿಗತ ಪ್ರಶ್ನೆಯಾಗಿರುತ್ತದೆ.

ಆದರೆ ಯೇಸುವಿನ ಕಾಲದಲ್ಲಿದ್ದ ಯೆಹೂದ್ಯರಲ್ಲಿದ್ದ ಹೆಮ್ಮೆ, ಕೇಡಿನ ಅಭಿಪ್ರಾಯ, ಮತ್ತು ಅವರ ಸ್ವಾರ್ಥದ ರಾಷ್ಟ್ರೀಯ ಮನೋಭಾವದ ನಿಮಿತ್ತ, ಅವರು ಮೆಸ್ಸಿಯನಿಗೆ ಒಳಗಾಗಿರುವ ವಿಚಾರಕ್ಕೆ ಸಂಬಂಧಪಟ್ಟ ಉತ್ತರವು ಇಪ್ಪತ್ತು ವರ್ಷಗಳ ನಂತರ ಉಂಟಾಯಿತು. ಸಭೆಯಲ್ಲಿ ಉಂಟಾಗಿದ್ದ ಎರಡು ಪಂಗಡಗಳ ನಡುವಿನ ತಾರತಮ್ಯವನ್ನು ನಿವಾರಿಸಲು ಸಹ ತಡವಾಯಿತು.

ಪ್ರಾಯಶಃ ಈ ದಿನಗಳಲ್ಲಿ ತಾರತಮ್ಯದ ವಿಚಾರವು ಉದ್ಭವಿಸದೆ ಇರಬಹುದು. ಆತನು ತನ್ನ ಅಪೊಸ್ತಲರಿಗೆ, "ಲೋಕದ ಕಟ್ಟಕಡೆಯವರೆಗೂ, ಸಕಲ ಜನಾಂಗಗಳಿಗೂ ಸುವಾರ್ತೆಯನ್ನು ಸಾರಿರಿ" ಎಂದು ಅಪ್ಪಣೆ ನೀಡಿದ್ದನು. ಇದರಲ್ಲಿ ಪ್ರತಿ ತಲೆ ಮಾರಿಗೂ ಸುವಾರ್ತೆಯನ್ನು ಸಾರಿರಿ ಎಂದು ಸೂಚನೆಯನ್ನು ನೀಡಲಾಗಿದೆ. ಪಂಚಾಶತ್ತಮ ದಿನದಿಂದ, ನ್ಯಾಯತೀರ್ಪಿನ ದಿನದವರೆಗೆ ಒಂದು ಬಾರಿ ಸುವಾರ್ತೆಯನ್ನು ಸಾರಬೇಕೆಂದು ಹೇಳಲಾಗಿದೆಯೇ? ಈ ವಿಧವಾಗಿ ಅರ್ಥೈಸಿಕೊಳ್ಳದೆ, ಪ್ರತಿ ಜನಾಂಗದವರಿಗೂ ಸುವಾರ್ತೆಯನ್ನು ಪದೇ ಪದೇ ಸಾರುತ್ತಿರಬೇಕು.

ಈ ದಿನದಲ್ಲಿ ಬದುಕಿರುವ ಜನರು ಚರಿತ್ರೆಯ ಜನರಿಗಾಗಲೀ ಅಥವಾ ಭವಿಷ್ಯದ ಪೀಳಿಗೆಗಾಗಲಿ ಸುವಾರ್ತೆಯನ್ನು ಸಾರಲು ಸಾಧ್ಯವಿಲ್ಲ. ಈಗ ಇರುವ ಜನರಿಗೆ ಮಾತ್ರ ಸುವಾರ್ತೆ ಹೇಳಲು ಸಾಧ್ಯವಿದೆ. ಲೋಕಕ್ಕೆಲ್ಲಾ ಸುವಾರ್ತೆಯನ್ನು ಸಾರುವ ಹೊಣೆಯು, ಈಗಿನ ಕಾಲದ ಜನರಿಗಿದೆ. ಸುವಾರ್ತೆಯು ಎಲ್ಲರಿಗಾಗಿದೆ, ಕ್ರೈಸ್ತರು ಸುವಾರ್ತೆಯನ್ನು ಸಾರದೆ ಹೋದರೆ, ಈಗಿನ ಪ್ರಪಂಚವು ಸುವಾರ್ತೆಯನ್ನು ಕೇಳುವ ಸಾಧ್ಯತೆಯಿರುವದಿಲ್ಲ.